


ದಿನಾಂಕ:12-01-2024 ರಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಾದ ಶ್ರೀ ಬಸವರಾಜ ಎಸ್ ಹೊರಟ್ಟಿ ಅವರು ವಿಧಾನಸೌಧದ ಮುಂಭಾಗದಲ್ಲಿರುವ ಟೀಕ್ ಗಿಡಗಳಿಗೆ ಗೆದ್ದಲಿ ಹುಳ ಹತ್ತಿದನ್ನ ನೋಡಿ ಸ್ವತ ತಾವೇ ಗೆದ್ದಲಿ ಹುಳುಗಳ ಕಳೆಯನ್ನ ತೆಗೆದು ಈ ರೀತಿ ಕಳೆ ಹತ್ತದ ಹಾಗೆ ನೋಡಿಕೊಳ್ಳಬೇಕೆಂದು ಅಲ್ಲಿನ ಅಧಿಕಾರಿಗಳಿಗೆ ತಿಳುವಳಿಕೆ ನೀಡಿದರು. ಅಮೂಲ್ಯವಾದ ಈ ಗಿಡಗಳಿಗೆ ಬಣ್ಣ ಹಚ್ಚಿ ಗೆದ್ದಲ ಹುಳು ಹತ್ತದ ಹಾಗೆ ನೋಡಿಕೊಳ್ಳಬೇಕು. ಆರಂಭದಲ್ಲಿ ಒಂದೆರಡು ಬಕೆಟ್ ನೀರು ಹಾಕಿದರೆ ಈ ರೀತಿ ಗೆದ್ದಲು ಹುಳು ಹತ್ತುವುದಿಲ್ಲ ಎಂಬ ಸಾಮಾನ್ಯ ಜ್ಞಾನದ ಅರಿವನ್ನು ಮೂಡಿಸಿದರು. ನಮ್ಮ ತೋಟದಲ್ಲಿ ಸಾವಿರಾರು ಗಿಡಗಳಿವೆ ಆ ಎಲ್ಲ ಗಿಡಗಳ ಬಡ್ಡಿಗೆ ಬಣ್ಣವನ್ನು ಹಚ್ಚಿರುವುದರಿಂದ ಗೆದ್ದಲುಗಳು ಹತ್ತದ ಹಾಗೆ ಸಂರಕ್ಷಣೆ ಮಾಡಿದ ಮಾಹಿತಿಯನ್ನು ಕೂಡ ಅವರಿಗೆ ನೀಡಿ ಮುಂದೆ ಈ ರೀತಿ ಆಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳಿದರು. ಅಲ್ಲಿರುವ ಅಧಿಕಾರಿಗಳು ಜನಸಾಮಾನ್ಯರು ಹೊರಟ್ಟಿ ಅವರ ಗಿಡ ಮರಗಳ ಪ್ರೀತಿಯನ್ನು ಕೊಂಡಾಡಿ ಅಧಿಕಾರ ಅಂತಸ್ತು ಹುದ್ದೆಗಳನ್ನು ಗಮನದಲ್ಲಿಟ್ಟುಕೊಳ್ಳದೆ ಸಾಮಾನ್ಯರಲ್ಲಿ ಸಾಮಾನ್ಯರಾಗಿ ಮಾಹಿತಿ ನೀಡಿದ್ದನ್ನ ನೋಡಿ ಖುಷಿಪಟ್ಟರು ಇವರೊಬ್ಬ ಅಪರೂಪದ ನಾಯಕರು ಎಂಬ ಮಾತುಗಳು ಅಲ್ಲಿ ಸೇರಿದ ಜನರಿಂದ ವ್ಯಕ್ತವಾದವು.